(e) The Government had issued directions to bifurcate such of the Government First Grade Colleges into separate arts and Science Colleges where the strength of students is more than 2000 and Accordingly proposal for bifurcation of this college into Arts and Science Colleges was included in the Plan Scheme of the department for the year 979–80. Again the same proposal is also included in the plan scheme department for the year 1980–81.

ಶ್ರೀ ಕೆ.ಎಚ್. ಹನುಮೇಗೌಡ.—ಸ್ವಾಮಿ ನನ್ನ ಪ್ರಶ್ನೆಗೆ ಉತ್ತರವಾಗಿ ಕಳೆದ ವರ್ಷ ಆರ್ಟ್ಸ್ ಮತ್ತು ಸೈನ್ಸ್ ಕಾಲೇಜನ್ನು ಪ್ರತ್ಯೇಕ ಮಾಡಬೇಕೆಂದು ೧೯೭೯–೮೦ನೇ ಸಾಲಿನ ಈ ಇಲಾಖೆಯ ಯೋಜನೆಯಲ್ಲಿ ಸೇರಿಸಲಾಗಿದೆ ಮತ್ತೆ ೧೯೮೦–೮೧ನೇ ಸಾಲಿನ ಯೋಜನೆಯಲ್ಲೂ ಸೇರಿಸಲಾಗಿದೆ ಎಂದು ಹೇಳಿದ್ದೀರಿ, ಅದನ್ನು ಈ ವರ್ಷ ಕಾರ್ಯಗತ ಮಾಡುತ್ತೀರಾ ? ಅಕೆಡೆಮಿಕ್ ಇಯರ್ ಪ್ರಾರಂಭವಾಗುವುದರೊಳಗೆ ಅದನ್ನು ಕಾರ್ಯಗತ ಮಾಡುತ್ತೀರಾ ?

ಶ್ರೀ ಜಿ.ಬಿ. ಶಂಕರರಾವ್.—ಕಾರ್ಯಗತ ಮಾಡಂವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಕೆ. ಎಚ್. ಹನುಮೇಗೌಡ.—ಫಸ್ಟ್‌ಗ್ರೇಡ್ ಕಾಲೇಜಿನಲ್ಲಿ ಸೈನ್ಸ್ ಮತ್ತು ಆರ್ಟ್ಸ್ ಕಾಲೇಜುಗಳು ಪ್ರತ್ಯೇಕವಾಗಿ ಪ್ರಾರಂಭವಾದ ಮೇಲೆ ಅಲ್ಲಿ ಹುಡುಗರಿಗೆ ಜಾಗ ಸಾಕಾಗುವುದಿಲ್ಲ. ಆದ್ದರಿಂದ ಬೇರೆ ಕಟ್ಟಡವನ್ನು ಕಟ್ಟಿಸುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಜಿ.ಬಿ. ಶಂಕರರಾವ್.—ಮಾನ್ಯ ಸದಸ್ಯರಿಗೆ ಇದು ತಿಳಿದ ವಿಷಯವೇ ಆಗಿದೆ. ಈಗ ಸೈನ್ಸ್ ವಿಭಾಗಕ್ಕೆ ಬೇಕಾದ ಕಟ್ಟಡ ರೆಡಿಯಾಗುತ್ತಿದೆ. ಅಲ್ಲಿ ಸ್ಯಾನಿಟರಿ ಫಿಟಿಂಗ್ಸ್ ಆಗುತ್ತಿದೆ. ಪಬ್ಲಿಕ್‌ವರ್ಕ್ಸ್ ಇಲಾಖೆಯವರು ಕಟ್ಟಡವನ್ನು ಒದಗಿಸಿದ ಮೇಲೆ ಸೈನ್ಸ್ ವಿಭಾಗಕ್ಕೆ ಅಲ್ಲಿ ಸ್ಥಳಾವಕಾಶ ಆಗುತ್ತದೆ. ಮತ್ತೆ, ಅದೇ ಕಾಲೇಜಿನಲ್ಲಿ ಎರಡು ಕಾಲೇಜುಗಳನ್ನು ಷಿಫ್ಟ್‌ಬೇಸಿಸ್ ಮೇಲೆ ನಡೆಸಲಾಗುತ್ತದೆ. ಹಣಕಾಸಿನ ತೊಂದರೆಯಿಂದಾಗಿ ಕಟ್ಟಡವನ್ನು ಒದಗಿಸುವುದು ಕಷ್ಟವಾಗುತ್ತದೆ. ಆದರೆ ಸೈನ್ಸ್ ಮತ್ತು ಆರ್ಟ್ಸ್ ಎರಡೂ ಕಾಲೇಜುಗಳನ್ನು ಬೇರೆ ಬೇರೆ ನಡೆಸುವುದಕ್ಕೆ ಆದೇಶ ಕೊಡುತ್ತೇನೆ.

Gajanur Lift Irrigation Project at Shivamoga Taluk

121. SRI S. M. SHEERNALI CHANDRASEKHAR (Hosanagar).—Will the Minister for Transport and Minor Irrigation be pleased to state:–

(a) whether Government propose to take up Gajanur Lift IrrigationProject at Shimoga taluk;

(b) if so, when the Government would start the work;

(c) whether Government is aware acute scarcity conditions prevail in the villages of Shimoga Taluk which are mainly rain fed areas ?

SRI M. M. J. SADYOJATHA (Minister for Transport and Minor Irrigation). –

(a) The Lift Irrigation Scheme from Tunga Anicut is under examination;

(b) Does not arise in view of reply at (a) above.

(c) There are no acute scarcity conditions prevailing in Shimoga District except Talagunda and Udugani Hoblies in Shikaripur Taluk in which nine villages have acute scarcity conditions till May 1979.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ಸ್ವಾಮಿ ನನ್ನ ಪ್ರಶ್ನೆಗೆ ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿರುವುದನ್ನು ನೋಡಿದರೆ ನನಗೆ ಬಹಳ ಖೇದವಾಗುತ್ತದೆ. ಹಿಂದೆ ಇದ್ದಂತಹ ಸಣ್ಣ ನೀರಾವರಿ ಸಚಿವರಾದ ಶ್ರೀಮಾನ್ ಚಂದ್ರೇಗೌಡರು ಶಿವಮೊಗ್ಗಾ ಜಿಲ್ಲೆಗೆ ಬಂದಿದ್ದಾಗ ಈ ಯೋಜನೆಗೆ ೧ ಕೋಟಿ ೩೦ ಲಕ್ಷ ರೂಪಾಯಿಗಳ ಪರಮಾವಧಿಯ ಹಣವನ್ನು ಖರ್ಚು ಮಾಡುತ್ತೇವೆ ಎಂದು ಹೇಳಿದ್ದರು. ಮತ್ತು ಈ ಯೋಜನೆಯನ್ನು ಬೈಫರ್‌ಕೇಟ್ ಮಾಡಿ ೭೦–೭೫ ಲಕ್ಷ ರೂಪಾಯಿಗಳನ್ನು ಒದಗಿಸಿ ಆ ಕೆಲಸವನ್ನು ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದರು. ಮತ್ತು ಅದಕ್ಕೆ ಸಂಬಂಧಪಟ್ಟ ಆಜ್ಞೆಯನ್ನು ನನ್ನ ಎದುರಿನಲ್ಲೇ ಮಾನ್ಯ ಮಂತ್ರಿಗಳು ಮಾಡಿದ್ದರು. ಹೀಗಿರುವಾಗ ಮಾನ್ಯ ಮಂತ್ರಿಗಳು ಈ ಯೋಜನೆ ಇನ್ನೂ ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಹೇಳಿದರೆ ಹೇಗೆ ?

ಶ್ರೀ ಎಂ ಎಂ.ಜೆ. ಸದ್ಯೋಜಾತ.—ಆ ವಿವರ ಈಗ ನನ್ನಲ್ಲಿ ಇಲ್ಲ. ಮಾನ್ಯ ಸದಸ್ಯರು ಆ ವಿವರಗಳನ್ನು ಒದಗಿಸಿದರೆ ಅದನ್ನು ನಾನು ಪರಿಶೀಲನೆ ಮಾಡುತ್ತೇನೆ.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ಶ್ರೀಮಾನ್ ಚಂದ್ರೇಗೌಡರು ಸಣ್ಣ ನೀರಾವರಿ ಸಚಿವರಾಗಿದ್ದಾಗ ಆ ಆರ್ಡರನ್ನು ಮಾಡಿದ್ದರು. ಮಾನ್ಯ ಮಂತ್ರಿಗಳು ಅದಕ್ಕೆ ಬೇಕಾದ ವಿವರಗಳನ್ನು ಸರ್ಕಾರದಿಂದ ತರಿಸಿಕೊಳ್ಳಬಹುದು. ಮಾನ್ಯ ಮಂತ್ರಿಗಳಿಗೆ ಅಧಿಕಾರ ಇದೆ. ಅವರು ಸರ್ಕಾರದಿಂದ ವಿವರಗಳನ್ನು ತರಿಸಿಕೊಳ್ಳಬಹುದು. ಅದು ಮಾಡುವುದನ್ನು ಬಿಟ್ಟು ನನ್ನನ್ನೇ ಕೇಳಿದರೆ ಹೇಗೆ ?

ಶ್ರೀ ಎಸ್.ಎಂ. ಶೀರ್ನಾಳಿ ಚಂದ್ರಶೇಖರ್.— ಸ್ವಾಮಿ ನನ್ನ (ಆ) ಪ್ರಶ್ನೆಗೆ ಉತ್ತರವಾಗಿ ಈ ಪ್ರಶ್ನೆ ಉದ್ಭವಿಸುವುದಿಲ್ಲ ಎಂದು ಹೇಳಿದ್ದೀರಿ, ಹಿಂದೆ ಇದ್ದ ಸಣ್ಣ ನೀರಾವರಿ ಮಂತ್ರಿಗಳಾದ ಶ್ರೀಮಾನ್ ಚಂದ್ರೇಗೌಡರು ಇದಕ್ಕೆ ಆರ್ಡರ್ ಮಾಡಿ ಕೂಡಲೇ ಇದನ್ನು ಮಾಡಿಕೊಡುತ್ತೇವೆ ಎಂದು ಹೇಳಿದ್ದರು. ಆದ್ದರಿಂದ ಇದನ್ನು ಎಷ್ಟು ದಿವಸಗಳಲ್ಲಿ ಕಾರ್ಯಗತ ಮಾಡಿಕೊಡುತ್ತೀರಾ ?

ಶ್ರೀ ಎಂ.ಎಂ.ಜೆ. ಸದ್ಯೋಜಾತ.—ಅದಕ್ಕೆ ಸಂಬಂಧಪಟ್ಟ ಫೈಲನ್ನು ನೋಡಿ ಹೇಳುತ್ತೇನೆ.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ಶಿವಮೊಗ್ಗ ಜಿಲ್ಲೆಯಲ್ಲಿ ಸುಮಾರು ೬೦ ಹಳ್ಳಿಗಳು ರೈನ್ ಷಾಡೋ ಪ್ರದೇಶ ಎಂದು ಡಿಕ್ಲೇರ್ ಆಗಿದೆ. ಆದ್ದರಿಂದ ಹಿಂದೆ ಇದ್ದ ಸಣ್ಣ ನೀರಾವರಿ ಶಾಖೆಯ ಮಂತ್ರಿಗಳು ೬೦ ಹಳ್ಳಿಗಳು ಪ್ರತಿವರ್ಷ ಅಭಾವಕ್ಕೆ ಒಳಗಾಗುತ್ತವೆ, ಆದ್ದರಿಂದ ಆ ಹಳ್ಳಿಗಳಿಗೆ ಸಂಪೂರ್ಣವಾಗಿ ಅಪ್ಪರ್ ತುಂಗಭದ್ರಾ ಲಿಫ್ಟ್ ಇರಿಗೇಷನ್ ಯೋಜನೆ ಮಾಡಿ ಪರಿಹಾರವನ್ನು ಒದಗಿಸುತ್ತೇವೆ ಎಂದು ಹೇಳಿದ್ದರು. ಹೀಗಿರುವಾಗ ಶಿಕಾರಿಪುರ ತಾಲ್ಲೂಕಿನ ತಾಳಗುಂಡ ಹಾಗೂ ಉಡಗಾಣಿ ಹೋಬಳಿಯಲ್ಲಿನ ಒಂಭತ್ತು ಹಳ್ಳಿಗಳಲ್ಲದೆ ಶಿವಮೊಗ್ಗ ಜಿಲ್ಲೆಯಲ್ಲಿ ಮೇ ೧೯೭೯ ರವರೆಗೆ ತೀವ್ರ ಅಭಾವ ಪರಿಸ್ಥಿತಿ ತಲೆದೋರಿಲ್ಲ ಎಂದು ಹೇಳಿದ್ದಾರೆ. ಇದನ್ನು ನೋಡಿದರೆ ಹಿಂದಿನ ಮಂತ್ರಿಗಳು ಹೇಳಿರುವುದಕ್ಕೂ ಇಂದಿನ ಮಂತ್ರಿಗಳು ಹೇಳುವುದಕ್ಕೂ ವಿರೋಧಾಭಾಸವಾಗುವುದಿಲ್ಲವೇ ?

ಶ್ರೀ ಎಂ.ಎಂ.ಜೆ. ಸದ್ಯೋಜಾತ.—ಅದಕ್ಕೆ ಸಂಬಂಧಪಟ್ಟ ಫೈಲನ್ನು ತರಿಸಿ ಅದಕ್ಕೆ ಉತ್ತರ ಒದಗಿಸಿಕೊಡುತ್ತೇನೆ.

ಶ್ರೀ ಕಡಿದಾಳ್ ದಿವಾಕರ್.—ಕಳೆದ ವರ್ಷ ಶಿವಮೊಗ್ಗ ಜಿಲ್ಲೆಯಲ್ಲಿ ೬ ಆಣೆಗಿಂತ ಕಡಿಮೆ ಬೆಳೆಯಾಗಿದೆ. ಅದು ಸ್ಕೇರ್ಸಿಟಿ ಏರಿಯಾ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ.ಎಂ.ಜೆ. ಸದ್ಯೋಜಾತ.—ಆ ಬಗ್ಗೆ ಈಗ ನನ್ನಲ್ಲಿ ವಿವರಗಳು ಇಲ್ಲ. ವಿವರಗಳನ್ನು ತರಿಸಿ ಒದಗಿಸುತ್ತೇನೆ.